
# ಶ್ರೀರಾಘವೇಂದ್ರತೀರ್ಥರ 'ಪರಿಮಳ'
## ಶ್ರೀರಾಯರ ಪ್ರತಿರೂಪ



ಚತುಶ್ಶಾಸ್ತ್ರಗಳಲ್ಲಿ ತಲಸ್ಪರ್ಶಿ ಜ್ಞಾನವನ್ನು ಹೊಂದಿದ ಕೆಲವೇ ವಿದ್ವಾಂಸರಲ್ಲಿ ವಿದ್ವಾನ್ ಶ್ರೀ ಡಿ. ಪ್ರಹ್ಲಾದಾಚಾರ್ಯರೂ ಒಬ್ಬರು. ಇವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ, ನಂತರ ತಿರುಪತಿ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಪ್ರಸ್ತುತ ಅಖಿಲ ಭಾರತ ಮಾಧ್ವಮಹಾಮಂಡಲದ ಅಧ್ಯಕ್ಷ ಸ್ಥಾನ ವಹಿಸಿಕೊಂಡು ಮಾಧ್ವರ ಏಳಿಗೆಗಾಗಿ ಶ್ರಮಿಸುತ್ತಿರುವವರು. ಆಚಾರ್ಯರ ಬಹುಮುಖ ವ್ಯಕ್ತಿತ್ವವನ್ನು ಗುರುತಿಸಿ ಶ್ರೀರಾಘವೇಂದ್ರಸ್ವಾಮಿಗಳವರ ಮಠವು ೨೦೦೫ ರಲ್ಲಿ ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಶ್ರೀಮದಾಚಾರ್ಯರು ರಚಿಸಿದ ಬ್ರಹ್ಮಸೂತ್ರಭಾಷ್ಯವನ್ನು ವರ್ಣಿಸುವ ಶ್ರೀಮಧ್ವವಿಜಯದ ಈ ನುಡಿ ತುಂಬ ಪ್ರಸಿದ್ಧವಾದುದು - **'ರೂಪಮನ್ಯದಿವ ಧನ್ಯಮಾತ್ಮನಃ'** - 'ಬ್ರಹ್ಮಸೂತ್ರಭಾಷ್ಯವು ಶ್ರೀಮದಾಚಾರ್ಯರ ಮತ್ತೊಂದು ರೂಪದಂತಿದೆ'. ಶ್ರೀಮದಾಚಾರ್ಯರ ವ್ಯಕ್ತಿತ್ವ, ಮಧ್ವವಿಜಯದಲ್ಲಿ ನಮಗೆ ತಿಳಿದುಬರುವಂತೆ, ಅತಿಗಂಭೀರವಾದದ್ದು, ಅತ್ಯಂತ ನಿರ್ದುಷ್ಟವಾದದ್ದು. ವ್ಯರ್ಥವಾದ ಒಂದು ಮಾತು ಅವರಿಂದ ಬರಲಾರದು. ಇತರ ಮತಗಳನ್ನು ಕುರಿತಂತೆ ಆಚಾರ್ಯರ ಖಂಡನೆ ಎಂದೂ ಹುಸಿಯಾದದ್ದಿಲ್ಲ - ಇತ್ಯಾದಿ ಎಲ್ಲ ಆಚಾರ್ಯರ ಗುಣಗಳೂ ಅವರ ಭಾಷ್ಯಗ್ರಂಥದಲ್ಲೂ ಪ್ರತಿಬಿಂಬಿತವಾಗಿವೆ. ತಮ್ಮ ಭಾಷ್ಯದ ಗಾಂಭೀರ್ಯವನ್ನು ಆಚಾರ್ಯರೇ ಅನುವ್ಯಾಖ್ಯಾನದಲ್ಲಿ ಬಣ್ಣಿಸಿದ್ದಿದೆ - **'ಭಾಷ್ಯಂ ಚ ಅತ್ಯರ್ಥವಿಸ್ತರಂ'** ಎಂದು. ಇದರಂತೆ, **ಶ್ರೀರಾಘವೇಂದ್ರಸ್ವಾಮಿಗಳ ನ್ಯಾಯಸುಧಾ ಟಿಪ್ಪಣಿ - ಪರಿಮಳವೂ ಶ್ರೀರಾಯರ ಮತ್ತೊಂದು ರೂಪವೇ ಆಗಿದೆ.**

ಶ್ರೀರಾಯರ ಅತ್ಯಂತ ನೆಚ್ಚಿನ ಶಿಷ್ಯರಲ್ಲೊಬ್ಬರಾದ ಶ್ರೀಅಪ್ಪಣಾಚಾರ್ಯರು, ತಮ್ಮ ಗುರುಗಳು ವೃಂದಾವನ ಪ್ರವೇಶ ಮಾಡಿದರೆಂಬ ಸುದ್ದಿಯನ್ನು ಕೇಳಿ ಮಂತ್ರಾಲಯದೆಡೆಗೆ ಧಾವಿಸುವಾಗ ಅಪ್ರಯತ್ನಪೂರ್ವಕವಾಗಿ ರಚಿಸಿದ ''ಶ್ರೀರಾಘವೇಂದ್ರ ಸ್ತೋತ್ರ''ದಲ್ಲಿ ಶ್ರೀರಾಘವೇಂದ್ರಸ್ವಾಮಿಗಳ ದಿವ್ಯ ವ್ಯಕ್ತಿತ್ವವೇ ಕಣ್ಣೆದುರಿಗೆ ನಿಂತಂತೆ ಭಾಸವಾಗುವುದು. ಆ ಸ್ತೋತ್ರದಲ್ಲಿ ಚಿತ್ರಿತವಾದ ಶ್ರೀರಾಯರ ಒಂದು ಮುಖ -

**'ದಯಾದಾಕ್ಷಿಣ್ಯವೈರಾಗ್ಯವಾಕ್ಪಾಟವಮುಖಾಂಕಿತಃ'** ಇಲ್ಲಿ ಬಣ್ಣಿಸಲಾಗಿರುವ ಗುಣಗಳು ಪಾಮರ ಭಕ್ತಜನರ ಬಗ್ಗೆ, ಜಗತ್ತಿನ ಬಗ್ಗೆ ಶ್ರೀರಾಯರ ಮನೋಧರ್ಮವನ್ನು ನಮಗೆ ಪರಿಚಯಿಸುವುದಾದರೆ, ಅವರ ಮತ್ತೊಂದು ಮುಖವನ್ನು ತೋರಿಸುವ **'ವಿದ್ವತ್ಪ್ರೌಢಿಮೋಚ್ಛ್ರೀಯಮಹಾವಿಶೇಷೋ ವಾಗ್ವೈಖರೀನಿರ್ಜಿತಭವ್ಯಶೇಷಃ'** ಎಂಬ ವಿಶೇಷಣಗಳು, ಅಂದಿನ ದಿಗ್ದಂತಿಗಳೆನಿಸಿದ ವಿದ್ವಜ್ಜನರು ಶ್ರೀರಾಯರಲ್ಲಿ ನೋಡಿದ ವಿವಿಧ ಶಾಸ್ತ್ರಪಾಟವ ಪಾರಮ್ಯವನ್ನು ನಮ್ಮ ಕಣ್ಣೆದುರಿಗೆ ನಿಲ್ಲಿಸುತ್ತವೆ. ಶ್ರೀಮದಾಚಾರ್ಯರ ಅಸಾಧಾರಣ ಗುಣಗಳು ಅವರು ಬರೆದ ಭಾಷ್ಯಗ್ರಂಥದಲ್ಲಿ ಪ್ರತಿಬಿಂಬಿತವಾಗಿ ಭಾಷ್ಯವು ಶ್ರೀಮದಾಚಾರ್ಯರ ಮತ್ತೊಂದು ರೂಪವೆನಿಸಿರುವಂತೆ ಶ್ರೀರಾಘವೇಂದ್ರಸ್ವಾಮಿಗಳ ಹಲವು ಅಸಾಧಾರಣ ಗುಣಗಳೂ ಅವರ ಪರಿಮಳ ಗ್ರಂಥದಲ್ಲಿ ಪಡಿಯಚ್ಚಾಗಿ ಮೂಡಿ, ಆ ಗ್ರಂಥವನ್ನು ಅವರ ಪ್ರತಿರೂಪವನ್ನಾಗಿ ಮಾಡಿವೆ.

ಕೆಳಗಿನ ಕೆಲ ಉದಾಹರಣೆಗಳು ಈ ಅಂಶವನ್ನು ನಮಗೆ ಮನಗಾಣಿಸುತ್ತವೆ-

ಶ್ರೀಮನ್ನ್ಯಾಯಸುಧಾ, ದ್ವೈತವೇದಾಂತಗ್ರಂಥಗಳ ಮಧ್ಯೆ ಮಾತ್ರವಲ್ಲದೆ ಭಾರತೀಯ ದರ್ಶನ ಗ್ರಂಥಗಳಲ್ಲೇ ಅತ್ಯಂತ ಶ್ರೇಷ್ಠ ಕೃತಿ ಎಂಬುದರಲ್ಲಿ ಎರಡು ಮಾತಿಲ್ಲ. ಶ್ರೀಮಧ್ವಶಾಸ್ತ್ರದ ಎಲ್ಲ ಪ್ರಧಾನ ಪ್ರಮೇಯಗಳ ಪ್ರಬಲ ಸಮರ್ಥನೆ, ಆ ಪ್ರಮೇಯ ಸೂಕ್ಷ್ಮಗಳ ಬಗ್ಗೆ ವಿಶಿಷ್ಟ ವಿವೇಚನೆಗಳು ಮಾತ್ರವಲ್ಲದೆ, ಇತರ ಎಲ್ಲ ಭಾರತೀಯ ದರ್ಶನಗಳ ಸಿದ್ಧಾಂತಗಳನ್ನು ತೀಕ್ಷ್ಣ ವಿಮರ್ಶೆಗೆ ಒಳಪಡಿಸಿ ಅವುಗಳ ಅಸಾರತೆಯನ್ನು ಹೃದಯಂಗಮವಾಗಿ ಎತ್ತಿತೋರಿಸುವ ಕಾರಣದಿಂದ ಈ ಗ್ರಂಥ ಮಧ್ವಶಾಸ್ತ್ರದ ಆಕರಗ್ರಂಥವಾಗಿದೆ. ಇಂತಹ ಒಂದು ಗ್ರಂಥದ ಅಧ್ಯಯನ ಅತ್ಯಂತ ಉಚ್ಚಮಟ್ಟದಲ್ಲಿ ನಡೆಯಬೇಕಾದರೆ ಅಧ್ಯಯನಾಸಕ್ತನಿಗೆ ವಿಶಿಷ್ಟ ಅರ್ಹತೆಗಳು - ದ್ವೈತಸಿದ್ಧಾಂತದ ಪ್ರಕರಣಗ್ರಂಥಗಳ ಅಧ್ಯಯನದಿಂದ ಗಳಿಸಿದ ವ್ಯುತ್ಪತ್ತಿಯ ಜೊತೆಗೆ ನ್ಯಾಯ, ಮೀಮಾಂಸಾ, ವ್ಯಾಕರಣ ಮೊದಲಾದ ನಾನಾ ಶಾಸ್ತ್ರಗಳ ಸಾಕಷ್ಟು ಪರಿಚಯವೂ - ಅನಿವಾರ್ಯವಾಗುತ್ತದೆ. ಆದರೆ, ಎಲ್ಲ ಅಧ್ಯೇತೃಗಳೂ ಇಂತಹ ವಿಶಿಷ್ಟ ಅಧಿಕಾರಿಗಳೇ ಆಗಿರುವ ಸನ್ನಿವೇಶಗಳಿರುವುದಿಲ್ಲ. ಸಾಮಾನ್ಯ ಅರ್ಹತೆ ಇದ್ದವರೂ ಶ್ರದ್ಧಾತಿಶಯದಿಂದ ಸುಧಾಗ್ರಂಥದ ಅಧ್ಯಯನಕ್ಕೆ ತೊಡಗುವುದನ್ನು ನಾವು ಇಂದಿಗೂ ನೋಡುತ್ತೇವೆ. ಇಂತಹ ಜಿಜ್ಞಾಸುಗಳು ತಮ್ಮ ಸಾಮಾನ್ಯ ಅರ್ಹತೆಯ

ಅವಲಂಬನೆಯಿಂದ ಸುಧಾಧ್ಯಯನ ಪ್ರಾರಂಭಿಸಿ ಆ ಗ್ರಂಥದ ಆಕರ್ಷಣೆಗೊಳಗಾಗಿ ವಿಶೇಷ ಪ್ರಯತ್ನಗಳಿಂದ ಅತ್ಯುತ್ತಮವಾದ ವೈದುಷ್ಯವನ್ನು ಗಳಿಸುವ ದೃಷ್ಟಾಂತಗಳಿಗೂ ಕೊರತೆ ಇಲ್ಲ. ಅಂತಹ ಜಿಜ್ಞಾಸುಗಳ ಮೇಲೆ ಪರಮ ದಯೆಯಿಂದ ಅವರನ್ನು ಪ್ರೋತ್ಸಾಹಿಸುವ ಪ್ರವೃತ್ತಿಯನ್ನು ಪರಿಮಳ ಗ್ರಂಥದಲ್ಲಿ ನಾವು ನೋಡಬಹುದು. ಆರಂಭದ ಭಾಗದಲ್ಲಿ ಸುಧಾಗ್ರಂಥದ ವೈಶಿಷ್ಟ್ಯವನ್ನು ಕುರಿತಾದ ಶ್ರೀರಾಯರ ಈ ಉದ್ಗಾರ ಪ್ರಸಿದ್ಧವಾದುದು -

**ಪ್ರತ್ಯಕ್ಷರಂ ಪ್ರತಿಪದಮ್ ಅನೇಕಾಕೂತಗರ್ಭಿತಾ ।**

**ಪ್ರತಿಭಾತಿ ಸುಧಾಽಥಾಪಿ ಗ್ರಂಥಾಲ್ಪತ್ವಾಯ ನೋಚ್ಯತೇ ॥**

ನ್ಯಾಯಸುಧಾಗ್ರಂಥದ ಪ್ರತಿಯೊಂದು ಅಕ್ಷರ, ಪ್ರತಿಯೊಂದು ಪದ ಅನೇಕಾಭಿಪ್ರಾಯ ಗರ್ಭಿತವಾಗಿರುವುದನ್ನು ಕಂಡರೂ ತಮ್ಮ ಟಿಪ್ಪಣಿ ಗಾತ್ರದಲ್ಲಿ ಲಘುವಾಗಿರಲಿ ಎಂಬ ಆಶಯದಿಂದ ಎಲ್ಲವನ್ನೂ ಹೇಳಹೋಗದ ಶ್ರೀರಾಯರಿಗೆ, ಸುಧಾಗ್ರಂಥದ ಅಧ್ಯಯನ-ಕ್ಕಾಗಿ ಹಾತೊರೆಯುವ 'ಅತಿವ್ಯುತ್ಪನ್ನ'ರಲ್ಲದವರ ಬಗ್ಗೆ ಇರುವ ದಯೆ ಅತ್ಯಂತ ಸ್ಪಷ್ಟ.

ಬೇರೆ ಸುಧಾ ಟಿಪ್ಪಣಿಗಳಲ್ಲಿ ಪ್ರಾಯಶಃ ಕಾಣಸಿಗದ, ಪರಿಮಳದಲ್ಲಿ ಅಲ್ಲಲ್ಲಿ ಕಾಣಸಿಗುವ ಒಂದು ವಿಶಿಷ್ಟತೆ - ಸುಧಾವಾಕ್ಯದ ಪದಗಳನ್ನು ವಿಭಜಿಸಿ ತೋರಿಸು-ವುದು. ಅನೇಕ ವಿದ್ಯಾರ್ಥಿಗಳು ತಪ್ಪಾಗಿ ಸುಧಾವಾಕ್ಯವನ್ನು ಓದಿ ಅರ್ಥವಾಗದೆ ಕ್ಲೇಶಪಡುವುದನ್ನು ತಪ್ಪಿಸುವುದೇ ಇಂಥ ಸ್ಥಳಗಳಲ್ಲಿ ಶ್ರೀರಾಯರ ಉದ್ದೇಶವಾಗಿದೆ ಎಂಬುದಕ್ಕೆ ಒಂದೆರಡು ಉದಾಹರಣೆಗಳು -

**'ನ ಭವಿಷ್ಯತ್ಕ್ರಿಯಾ ಕಾರ್ಯಂ ಸ್ವಕ್ಷ್ವತೀಶ ಇತಿ ಹ್ಯಪಿ ಕಾರ್ಯಂ ಸ್ಯಾತ್'** - ಎಂಬ ಕಾರ್ಯತಾವಾದದ ಭಾಗದಲ್ಲಿ ಬರುವ ಅನುವ್ಯಾಖ್ಯಾನವನ್ನು ವಿವರಿಸುವಾಗ ಸುಧಾದಲ್ಲಿ ಉದಾಹರಿಸಿದ ಒಂದು ಲೌಕಿಕ ವಾಕ್ಯ ಹೀಗಿದೆ - **'ದೇವದತ್ತ ಕೃತಃ ಕಿಂ ತ್ವಯಾ ಕಟಃ ಕ್ರಿಯತೇ ವಾ ಇತಿ ಪೃಷ್ಟಃ ಪ್ರತ್ಯಾಹ ನ ಮಯಾ ಕೃತಃ ನಾಪಿ ಕ್ರಿಯತೇ ಕಿಂತು ಕಾರ್ಯ ಇತಿ ।'** ಈ ಭಾಗಕ್ಕೆ ಸಂಬಂಧಿಸಿದಂತೆ ಪರಿಮಳದಲ್ಲಿ ಒಂದೇ ಒಂದು ವಾಕ್ಯವಿದೆ - **'ದೇವದತ್ತೇತಿ ಸಂಬುದ್ಧ್ಯಂತಮ್'** - ಎಂದು. ಈ ಸಂದರ್ಭದಲ್ಲಿ ಪ್ರಸ್ತುತವಾದ ಶಾಸ್ತ್ರಾರ್ಥವೇನೇ ಇರಲಿ, ಇಲ್ಲಿ ಉದಾಹರಿಸಿದ ಲೌಕಿಕ

ವಾಕ್ಯವನ್ನು ತಪ್ಪಾಗಿ ಓದಿದಾಗ ಅಸಂಗತವಾಕ್ಯದಂತೆ ಈ ವಾಕ್ಯ ತೋರುವುದು. ಇಲ್ಲಿರುವ 'ದೇವದತ್ತಕೃತಃ' ಎಂಬ ಪದಗಳನ್ನು ಒಂದು ಸಮಾಸಪದವೆಂದು ಭಾವಿಸಿ ಓದಬಹುದು. ಹಾಗೆ ಪಠಿಸಿದಲ್ಲಿ ''ದೇವದತ್ತನು ಮಾಡಿದ ಚಾಪೆಯನ್ನು ನೀನು ಮಾಡುತ್ತಿರುವೆಯಾ?'' ಎಂದು ಪ್ರಶ್ನಿಸಿದಾಗ ಅವನುತ್ತರಿಸಿದನು - ''ನಾನು ಮಾಡಿಲ್ಲ, ಮಾಡುತ್ತಲೂ ಇಲ್ಲ, ಮಾಡಬೇಕಷ್ಟೆ'' ಎಂದು. ಇಲ್ಲಿ ಅಸಾಂಗತ್ಯ ಸ್ಪಷ್ಟ. 'ದೇವದತ್ತನು ಮಾಡಿದ ಚಾಪೆಯನ್ನು ನೀನು ಮಾಡುತ್ತಿರುವೆಯಾ?' ಎಂಬ ಪ್ರಶ್ನೆಯೇ ಅಸಂಬದ್ಧವಷ್ಟೆ. ಮುಂದಿನ ಉತ್ತರಕ್ಕೂ ಈ ಪ್ರಶ್ನೆಗೂ ಸಂಬಂಧವಿಲ್ಲ-ದಿರುವುದೂ ಅಷ್ಟೇ ಸ್ಪಷ್ಟ. ಇಲ್ಲಿ ಶ್ರೀರಾಯರ ವ್ಯಾಖ್ಯಾನ ಸಾಮಾನ್ಯ ಮಟ್ಟದ ವಿದ್ಯಾರ್ಥಿಯ ನೆರವಿಗೆ ಬರುತ್ತದೆ. **'ದೇವದತ್ತೇತಿ ಸಂಬುದ್ಧ್ಯಂತಂ'** - ದೇವದತ್ತ ಎಂಬ ಪದ ಸಂಬೋಧನ ಪ್ರಥಮಾವಿಭಕ್ತ್ಯಂತವಾಗಿದೆ ಎಂದು ಶ್ರೀರಾಯರ ವಿವರಣೆ. ಈಗ ಆ ಸಾಮಾನ್ಯ ವಿದ್ಯಾರ್ಥಿ ವಾಕ್ಯವನ್ನು ಅರ್ಥಮಾಡಿಕೊಳ್ಳುವುದು ಹೀಗೆ - ''ಎಲೈ ದೇವದತ್ತ! ನೀನು ಚಾಪೆಯನ್ನು ಮಾಡಾಯಿತೋ ಅಥವಾ ಮಾಡುತ್ತಿದ್ದೀಯೋ'' ಎಂದು ಪ್ರಶ್ನಿಸಲ್ಪಟ್ಟವನು ಹೀಗೆ ಉತ್ತರಿಸುತ್ತಾನೆ - ''ನಾನು ಮಾಡಿಲ್ಲ, ಮಾಡುತ್ತಲೂ ಇಲ್ಲ, ಮಾಡಬೇಕಷ್ಟೇ'' ಎಂದು. ಈಗ ಈ ಪ್ರಶ್ನೋತ್ತರಗಳು ಸಂದರ್ಭಕ್ಕೆ ಅತ್ಯಂತ ಸಂಗತವಾಗಿ ಕಾಣುತ್ತವೆ ಎನ್ನುವುದನ್ನು ವಿವರಿಸುವ ಅಗತ್ಯವಿಲ್ಲ. **ಸಂಸ್ಕೃತ ಭಾಷೆಯ ಬಗ್ಗೆ ಸಾಕಷ್ಟು ಹಿಡಿತ-ವಿಲ್ಲದ ಶ್ರದ್ಧಾವಂತ ಸಾಮಾನ್ಯ ವಿದ್ಯಾರ್ಥಿಗಳ ಕಷ್ಟವನ್ನು ನಿವಾರಿಸುವ ದಯಾಪ್ರವೃತ್ತಿ ಶ್ರೀರಾಯರ ಈ ವ್ಯಾಖ್ಯಾನದಲ್ಲಿ ಎದ್ದುಕಾಣುವುದು.**

ಮುದ್ರಿತ ಗ್ರಂಥಗಳು ಓದುಗರಿಗೆ ಸಿಗಲು ಪ್ರಾರಂಭವಾಗಿ ಸುಮಾರು ೧೫೦ - ೧೮೦ ವರ್ಷಗಳಾಗಿರಬಹುದಷ್ಟೆ. ಅದಕ್ಕೆ ಮುಂಚೆ ಮನೆಯಲ್ಲಿದ್ದ ಹಿಂದಿನ ಹಸ್ತಪ್ರತಿಗಳ ನೆರವಿನಿಂದಲೋ ಅಥವಾ ತಾನೇ ಪ್ರತಿಮಾಡಿಕೊಂಡ ಪುಸ್ತಕದ ಸಹಾಯದಿಂದಲೋ ವಿದ್ಯಾರ್ಥಿ ಅಧ್ಯಯನವನ್ನು ಮಾಡಬೇಕಾಗಿದ್ದಿತು. ಅಂತಹ ಹಸ್ತಪ್ರತಿಗಳಲ್ಲಿ ಪದ-ವಾಕ್ಯಗಳ ವಿಂಗಡಣೆಯನ್ನು ಮಾಡದೆ ಅಕ್ಷರಗಳನ್ನು ಒತ್ತೊತ್ತಾಗಿ ಬರೆಯುವ ಪ್ರವೃತ್ತಿಯೇ ಹಸ್ತಪ್ರತಿಕಾರರಲ್ಲಿ ಇದ್ದುದನ್ನು ನಾವು ಗಮನಿಸಬಹುದು. ಮುದ್ರಣ ಪ್ರಾರಂಭವಾದ ಮೇಲೂ, ಅಕ್ಷರಗಳು ಸ್ಫುಟವಾಗಿ ಕಾಣುತ್ತವೆ ಎಂಬ ಸೌಲಭ್ಯವಿದ್ದರೂ, ಅಕ್ಷರಗಳನ್ನು, ಪದಗಳನ್ನು ಸ್ವಲ್ಪವೂ ಜಾಗ ಬಿಡದೆ ಒತ್ತೊತ್ತಾಗಿ

ಮುದ್ರಿಸುವ ಪ್ರವೃತ್ತಿಯೇ ಇದ್ದಿತೆನ್ನುವುದೂ ಹಳೆಯ ಮುದ್ರಿತಗಳಲ್ಲಿ ನಾವು ನೋಡಬಹುದು. ಇತ್ತೀಚೆಗೆ ಮಾತ್ರ, ಪದಗಳನ್ನು - ವಾಕ್ಯಗಳನ್ನು ಬಿಡಿಸಿ ಬಿಡಿಸಿ ಓದಲು ಅನುಕೂಲವಾಗುವಂತೆ ಮುದ್ರಿಸುವ ರೀತಿ ಹೆಚ್ಚಾಗಿ ಬಳಕೆಗೆ ಬಂದಿದೆ. ಹಿಂದಿನ ಕಾಲದ ಸಾಮಾನ್ಯ ಮಟ್ಟದ ವಿದ್ಯಾರ್ಥಿಗಳಲ್ಲಿ ಕರುಣೆಯಿಂದ ಸ್ಪಷ್ಟತೆ ನೀಡುವ ಶ್ರೀರಾಯರ ವ್ಯಾಖ್ಯಾನ ಪದ್ಧತಿಗೆ ಮತ್ತೊಂದು ಉದಾಹರಣೆ ಕೆಳಗಿದೆ -

ಇದೇ ಕಾರ್ಯತಾವಾದದ ಪ್ರಕರಣದಲ್ಲಿ ಬರುವ ಇನ್ನೊಂದು ಸುಧಾವಾಕ್ಯ ಹೀಗಿದೆ - **'ನನು ಸತ್ಯಪಿ ಚಂದ್ರಮಂಡಲಾದೌ ಇಷ್ಟಸಾಧನತ್ವೇನ ಕಾರ್ಯತಾ-ಬುದ್ಧಿರಿತಿ ಚೇತ್'** - ಈ ವಾಕ್ಯದಲ್ಲಿ **'ಇಷ್ಟಸಾಧನತ್ವೇನ'** - ಎಂಬ ತೃತೀಯಾ ವಿಭಕ್ತ್ಯಂತ ಪದವಿದೆ ಎಂದು ಭಾವಿಸಿದರೆ ವಾಕ್ಯದ ಅರ್ಥ ಅನನ್ವಿತವಾಗುತ್ತದೆ. 'ಚಂದ್ರಮಂಡಲ ಮೊದಲಾದ ವಸ್ತುಗಳಲ್ಲಿ ಇಷ್ಟಸಾಧನವಾದ್ದರಿಂದ ಅವು ಮಾಡಲ್ಪಡತಕ್ಕವು ಎಂಬ ಬುದ್ಧಿಯುಂಟಾಗುವುದು' ಎಂದು ಅರ್ಥಮಾಡಲು ಪ್ರಯತ್ನಿಸಿದರೂ ಅದು ಅರ್ಥವಿಲ್ಲದ ಮಾತೇ ಸರಿ. ಚಂದ್ರಮಂಡಲ ಮೊದಲಾದವುಗಳು ಕೆಲವರಿಗೆ ಇಷ್ಟಸಾಧನವೆಂದೆನಿಸಬಹುದು. ಆದರೆ ಅವುಗಳನ್ನು ಮಾಡುವುದೆಂದರೇನು? ಜೊತೆಗೆ **'ಸತ್ಯಪಿ'** - 'ಇದ್ದರೂ ಕೂಡ' ಎಂಬ ಪದಗಳಿಗೂ ಅನ್ವಯವಾಗದು. ವಿದ್ಯಾರ್ಥಿಗಳಿಗೆ ಬರಬಹುದಾದ ಈ ತೊಂದರೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಶ್ರೀರಾಯರು ಬರೆಯುವ ಒಂದು ವಾಕ್ಯ - **'ನ ಕಾರ್ಯತಾಬುದ್ಧಿರಿತಿ ಪದಚ್ಛೇದಃ'** ಅಂತಹ ವಿದ್ಯಾರ್ಥಿಗಳಿಗೆ ತುಂಬ ಸಹಾಯಕ. ಟಿಪ್ಪಣಿಯ ಸೂಚನೆಯನ್ನನುಸರಿಸಿ **'ನನು ಸತ್ಯಪಿ ಚಂದ್ರಮಂಡಲಾದೌ ಇಷ್ಟಸಾಧನತ್ವೇ ನ ಕಾರ್ಯತಾ-ಬುದ್ಧಿರಿತಿ ಚೇತ್'** - ಎಂದು ವಿದ್ಯಾರ್ಥಿ ವಾಕ್ಯವನ್ನೋದಬೇಕು. 'ಚಂದ್ರಮಂಡಲ ಮೊದಲಾದ ಪದಾರ್ಥಗಳಲ್ಲಿ ಇಷ್ಟಸಾಧನತ್ವವಿದ್ದರೂ ಅವುಗಳು ಕಾರ್ಯ ಎಂಬ ಬುದ್ಧಿಯಿಲ್ಲ ಎಂದು ಹೇಳಿದರೆ' ಎಂಬ ಸುಸಂಗತವಾದ ಅರ್ಥ ಈಗ ಸ್ಫುಟವಾಗುವುದು. ಹೀಗೆ, ಶ್ರೀರಾಯರ **ಅಪೂರ್ವ ಸ್ವಭಾವವಾದ ದಯೆ ಅವರ ಕೃತಿ 'ಪರಿಮಳ'ದಲ್ಲಿ ಅಲ್ಲಲ್ಲಿ ಒಡಮೂಡಿರುವುದನ್ನು ನಾವು ನೋಡಬಹುದು.**

ಶ್ರೀರಾಯರ ಇನ್ನೊಂದು ಮುಖ - ವಿದ್ವಾಂಸರಿಗೆ ಮಾತ್ರ ತಿಳಿದು ಬರುವ ಅವರ ಅಗಾಧ ವೈದುಷ್ಯ - ಶ್ರೀಅಪ್ಪಣಾಚಾರ್ಯರು ಬಣ್ಣಿಸಿದ **'ವಿದ್ವತ್ಪರಿಜ್ಞೇಯ-**

**ಮಹಾವಿಶೇಷಃ**' - ಪರಿಮಳದಲ್ಲಿ ಪ್ರತಿಫಲಿತವಾಗಿರುವುದಕ್ಕೂ ಹೇರಳವಾಗಿ ನಿದರ್ಶನಗಳನ್ನು ಕೊಡಬಹುದು. ಒಂದು ಉದಾಹರಣೆಯನ್ನು ಮಾತ್ರ ಕೆಳಗೆ ಕೊಡಲಾಗಿದೆ-

ಓಂಕಾರವು ಪ್ರಥಮಸೂತ್ರದ ಅವಯವವೆಂದು ಸ್ಪಷ್ಟಪಡಿಸಿ, ಆಚಾರ್ಯರು ಓಂಕಾರದ ವ್ಯಾಖ್ಯಾನವನ್ನು ಅನುವ್ಯಾಖ್ಯಾನದಲ್ಲಿ ಮಾಡಿದ್ದನ್ನನುಸರಿಸಿ ಸುಧಾಗ್ರಂಥದಲ್ಲಿ ಓಂಕಾರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ವಿಸ್ತಾರವಾಗಿ ವಿವೇಚಿಸಲಾಗಿದೆ. ಜಿಜ್ಞಾಸಾಧಿಕರಣದ ಪೂರ್ವಪಕ್ಷಕ್ಕೆ ಉತ್ತರವಾಗಿ ಹೊರಟ ಪ್ರಥಮ ಸೂತ್ರದ ವ್ಯಾಖ್ಯಾನದಲ್ಲಿ ಓಂಕಾರಾರ್ಥ ವಿವೇಚನೆಯು ಪ್ರಾರಂಭದಲ್ಲಿದ್ದು ಅನೇಕ ವಿಷಯಗಳು ಅಲ್ಲಿ ಪ್ರಸ್ತುತವಾಗಿವೆ. ಅವೆಲ್ಲವೂ ವ್ಯುತ್ಪನ್ನರಾದ ವಿದ್ಯಾರ್ಥಿಗಳಿಗೂ ಗಮನಕ್ಕೆ ಬರುವುದು ಮತ್ತು ಬುದ್ಧಿಸ್ಥವಾಗುವುದು ಕಷ್ಟವೇ. ಈ ಪ್ರಕರಣದ ಕೊನೆಯಲ್ಲಿ ಶ್ರೀರಾಯರು ಎರಡು ಸಂಗ್ರಹಶ್ಲೋಕಗಳನ್ನು ರಚಿಸಿ ಓಂಕಾರ ವ್ಯಾಖ್ಯಾನ ಸಂದರ್ಭದಿಂದ ಲಭಿಸುವ ಮುಖ್ಯ ಪ್ರಯೋಜನಗಳನ್ನು ಸಂಗ್ರಹಿಸಿರುವುದು ವಿದ್ವಾಂಸರಿಗೂ ಅತ್ಯಂತ ಉಪಕಾರಕವಾಗಿದೆ. ಆ ಶ್ಲೋಕಗಳು ಹೀಗಿವೆ :

> **ಮಂಗಲಾಪ್ತವಣೀ ಯುಕ್ತಿವಿಶೇಷದ್ಯೋತನಂ ತಥಾ ।**
> **ಮೀಮಾಂಸಾನುಗ್ರಾಹ್ಯಮಾನಕೀರ್ತನಂ ಪೂರ್ವತಂತ್ರತಃ** ॥ ೧ ॥
>
> **ಅಗತಾರ್ಥತಾಸೂಚನಂ ಚೇತ್ಯೇವಂ ಪಂಚಪ್ರಯೋಜನಃ ।**
> **ಸೌತ್ರಪ್ರಾಥಮಿಕೋಽಂಕಾರಃ ಶ್ರುತಿಸಿದ್ಧೋಽವಧಾರಿತಃ** ॥ ೨ ॥

'**ಅಥಾತೋ ಬ್ರಹ್ಮಜಿಜ್ಞಾಸಾ**' ಎಂದಿಷ್ಟೇ ಮೊದಲನೆಯ ಸೂತ್ರವೆಂದು ತಿಳಿದಿರುವ ಇತರ ಮತದವರಿಗೆ ಓಂಕಾರವೂ ಪ್ರಥಮಸೂತ್ರದ ಒಂದು ಅವಯವವಾಗಿದೆಯೆಂದು '**ಸ್ವವತ್ಸನೋಽಂಕೃತಂ ಬ್ರಹ್ಮ**' ಎಂಬ ಶ್ರುತಿಯ ಆಧಾರದಿಂದ ಸಾರಿದವರು ಆಚಾರ್ಯರೊಬ್ಬರೆ. ಹೀಗೆ, ಶ್ರುತಿಯಿಂದ ಪ್ರಥಮಸೂತ್ರದ ಭಾಗವೆಂದು ಸಿದ್ಧವಾದ ಓಂಕಾರವು ಐದು ಪ್ರಯೋಜನಗಳನ್ನು ಪಡೆದಿದೆಯೆಂದು ಸುಧಾಗ್ರಂಥದಿಂದ ತಿಳಿದು ಬರುವುದೆಂದು ಶ್ರೀರಾಯರ ಭಾವ. ಮೇಲಿನ ಶ್ಲೋಕಗಳಲ್ಲಿ ಆ ಪ್ರಯೋಜನಗಳನ್ನು ಉಲ್ಲೇಖಿಸಿದಾರೆ.

೧. **ಮಂಗಲ** : ಶಂಖ, ವೀಣಾ, ವೇಣು ಧ್ವನಿಗಳಂತೆ ಕೇಳುವುದರಿಂದಲೇ ಮಂಗಲಪ್ರದವಾದ ಓಂಕಾರವು ಪ್ರಥಮಸೂತ್ರದ ಆದಿಪದವಾಗಿದ್ದು ಇಡೀ ಬ್ರಹ್ಮಮೀಮಾಂಸಾಶಾಸ್ತ್ರಕ್ಕೆ ಮಂಗಲಾಚರಣರೂಪವಾಗಿದೆ.

೨. **ಅಸ್ರವಣ** : ಆದ್ಯಂತಗಳಲ್ಲಿ ಓಂಕಾರೋಚ್ಚಾರವಿಲ್ಲದೆ ಬ್ರಹ್ಮಸೂತ್ರವನ್ನು ಪಠಿಸಿದರೆ, ಬರಬೇಕಾಗಿದ್ದ ಫಲವು ಲಭಿಸದೆ ನಷ್ಟವಾಗುವುದು. ಆ ನಷ್ಟವನ್ನು ತಡೆಯುವುದು ಓಂಕಾರದಿಂದ ಲಭಿಸುವ ಎರಡನೆ ಪ್ರಯೋಜನ.

೩. **ಯುಕ್ತಿವಿಶೇಷದ್ಯೋತನ** : ಓಂಕಾರವು ಪರಮಾತ್ಮನ ಗುಣಪೂರ್ಣತ್ವವನ್ನು ಹೇಳುವ ಪದವಾಗಿದೆ. ಗುಣಪೂರ್ಣನಾದ ಆ ಬ್ರಹ್ಮನು ಜೀವರಿಂದ ಅತ್ಯಂತ ಭಿನ್ನನಾಗಿದ್ದು, ಅವನ ಸ್ವರೂಪವು ಮುಮುಕ್ಷುಗಳಾದ ಅಧಿಕಾರಿಗಳಿಗೆ ಸಂದಿಗ್ಧವಾಗಿದೆಯಾದ್ದರಿಂದ ಅವನು ಶಾಸ್ತ್ರವಿಷಯನಾಗುವನೆಂದು ಓಂಕಾರವು ಬ್ರಹ್ಮನಿಗೆ ಶಾಸ್ತ್ರವಿಷಯತ್ವವನ್ನು ಸಮರ್ಥಿಸುವ ಯುಕ್ತಿವಿಶೇಷವನ್ನು ಸೂಚಿಸುವುದು ಮತ್ತೊಂದು ಪ್ರಯೋಜನವೆಂದು ಆಶಯವಾಗಿದೆ.

೪. **ಮೀಮಾಂಸಾನುಗ್ರಾಹ್ಯಮಾನಕೀರ್ತನ** : ಸಮಸ್ತವೇದಗಳೂ ಓಂಕಾರದ ವ್ಯಾಖ್ಯಾನರೂಪವಾದ್ದರಿಂದ, ಬ್ರಹ್ಮಮೀಮಾಂಸಾಶಾಸ್ತ್ರವು ಮಾಡುವ ಬ್ರಹ್ಮವಿಚಾರವು ಸಕಲವೇದಗಳ ಅರ್ಥಗಳನ್ನು ನಿರ್ಧರಿಸುವ ಮೂಲಕ ಸಕಲವೇದರೂಪವಾದ ಪ್ರಮಾಣಗಳಿಗೆ ಅನುಗ್ರಾಹಕವಾಗಿದೆ ಎಂದು ಸೂಚಿಸುವುದು ಓಂಕಾರದ ಇನ್ನೊಂದು ಪ್ರಯೋಜನವಾಗಿದೆ.

೫. **ಅಗತಾರ್ಥತಾಸೂಚನೆ** : ಪೂರ್ವಮೀಮಾಂಸಾಶಾಸ್ತ್ರದಲ್ಲೇ ವೇದಾರ್ಥವಿಚಾರ ಮಾಡಲಾಗಿರುವುದರಿಂದ ಪುನಃ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ವೇದಾರ್ಥವಿಚಾರ ಮಾಡುವುದು ವ್ಯರ್ಥವೆಂಬ ಶಂಕೆಗೂ ಓಂಕಾರವು ಉತ್ತರ ನೀಡುತ್ತದೆ. ಸಮಸ್ತ ವೇದಗಳಿಗೆ ವ್ಯಾಖ್ಯೇಯವಾದ ಓಂಕಾರವು ಗುಣಪೂರ್ಣನಾದ ಪರಮಾತ್ಮನನ್ನು ಹೇಳುವ ಪದವಾಗಿದ್ದು ಸಮಸ್ತ ವೇದಗಳೂ ಪರಮಾತ್ಮನನ್ನೇ ಮುಖ್ಯವಾಗಿ ಪ್ರತಿಪಾದಿಸುವ ಉದ್ದೇಶವುಳ್ಳವುಗಳೆಂದು ಸೂಚಿಸುತ್ತಿದೆ. ತನ್ಮೂಲಕವಾಗಿ ಸರ್ವವೇದಾರ್ಥಗಳ ಜಿಜ್ಞಾಸೆಯು ಈ ಶಾಸ್ತ್ರದಲ್ಲೇ ಮುಖ್ಯವಾಗಿ ನಡೆಯುವುದೆಂದೂ, ಪೂರ್ವಮೀಮಾಂಸಾಶಾಸ್ತ್ರದಲ್ಲಿ ವೇದದ ಒಂದು ಭಾಗದ ಅಮುಖ್ಯಾರ್ಥವಾದ ಧರ್ಮದ ಜಿಜ್ಞಾಸೆಯನ್ನು ಮಾಡಲಾಗಿದೆಯಾದ್ದರಿಂದ,

ಸರ್ವಥಾ ಪೂರ್ವಮೀಮಾಂಸಾಶಾಸ್ತ್ರದಿಂದ ಬ್ರಹ್ಮಸೂತ್ರಗಳಿಗೆ ಗತಾರ್ಥತ್ವವು ಬರಲಾರದೆಂದೂ ಓಂಕಾರವು ಸೂಚಿಸುತ್ತಿದೆ. ಇದು ಐದನೆಯ ಪ್ರಯೋಜನವೆಂದು ಶ್ರೀರಾಯರು ಸ್ಪಷ್ಟಪಡಿಸಿ ವಿದ್ವಜ್ಜನರಿಗೂ ಮಹೋಪಕಾರ ಮಾಡಿದ್ದಾರೆ.

ಇಂತಹ ವೇದಾಂತಶಾಸ್ತ್ರಕ್ಕೆ ಸಂಬಂಧಿಸಿದ ಅಪೂರ್ವ ವಿಷಯಗಳನ್ನು ಎತ್ತಿ ತೋರಿಸುವುದಲ್ಲದೆ, ಪೂರ್ವಮೀಮಾಂಸಾಶಾಸ್ತ್ರಕ್ಕೆ ಹಾಗೂ ವ್ಯಾಕರಣಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಅನೇಕ ಕಡೆಗಳಲ್ಲಿ ಹೃದಯಂಗಮವಾಗಿ ನಿರೂಪಿಸಿರುವುದು ಶ್ರೀರಾಘವೇಂದ್ರಸ್ವಾಮಿಗಳ ವಿದ್ವತ್ಪರಿಚ್ಛೇಯ ಮಹಾವಿಶೇಷತ್ವಕ್ಕೆ ಸೂಚಕವಾಗಿದೆ.

ಇಂತಹ ಉತ್ಕೃಷ್ಟ ಕೃತಿಯಾದ ಪರಿಮಳ ಗ್ರಂಥವು ಶ್ರೀರಾಯರ ಪ್ರತಿರೂಪವೆಂಬ ವಿಷಯವು ಪರಿಮಳ ಗ್ರಂಥದ ಅಧ್ಯಯನದಿಂದ ನಿಚ್ಚಳವಾಗುತ್ತದೆ.